**All India Radio: Bangalore**
**National Bulletin In Kannada**
**27.06.2025 / 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ಒಡಿಶಾದಲ್ಲಿಂದು ವಿಶ್ವವಿಖ್ಯಾತ ಪುರಿ ಜಗನ್ನಾಥ ರಥಯಾತ್ರೆಗೆ ಚಾಲನೆ

೨. ಆಪರೇಷನ್ ಸಿಂಧುಗೆ ಸಹಕರಿಸಿದ ರಾಷ್ಟ್ರಗಳಿಗೆ ಧನ್ಯವಾದ ಅರ್ಪಿಸಿದ ಕೇಂದ್ರ ಸರ್ಕಾರ

೩. ಭಾರತಕ್ಕೆ ಕಳ್ಳಸಾಗಣೆ ಮಾಡಿದ ೧ ಸಾವಿರದ ೧೧೫ ಟನ್ ಪಾಕಿಸ್ತಾನದ ಸರಕುಗಳನ್ನು ವಶಪಡಿಸಿಕೊಂಡ ಡಿಆರ್ಐ

೪. ೨೦೨೯ರ ವಿಶ್ವ ಪೊಲೀಸ್ ಮತ್ತು ಅಗ್ನಿಶಾಮಕ ಕ್ರೀಡಾಕೂಟಕ್ಕೆ ಭಾರತ ಆತಿಥ್ಯ

><><><><><><><

ಒಡಿಶಾದ ಪವಿತ್ರ ನಗರ ಪುರಿಯಲ್ಲಿಂದು ವಿಶ್ವವಿಖ್ಯಾತ ಜಗನ್ನಾಥ ಮತ್ತು ಅವರ ಸಹೋದರ-ಸಹೋದರಿ ದೇವತೆಗಳ ರಥಯಾತ್ರೆ ನಡೆಯಲಿದೆ. ಜಗತ್ತಿನ ಮೂಲೆಮೂಲೆಗಳಿಂದ ಸಾವಿರಾರು ಭಕ್ತರು ಪುರಿಗೆ ಆಗಮಿಸಿ ಈ ೯ ದಿನಗಳ ಶ್ರೀ ಗುಂಡಿಚಾ ಮಂದಿರದವರೆಗಿನ ಯಾತ್ರೆಯನ್ನು ಕಣ್ತುಂಬಿಕೊಳ್ಳಲು ಆಗಮಿಸಿದ್ದಾರೆ. ೧೨ನೇ ಶತಮಾನಕ್ಕೆ ಸೇರಿದ ಪುರಿಯ ಶ್ರೀ ಜಗನ್ನಾಥ ದೇವಾಲಯದ ಸೇವಕರಿಂದ ದೇವತೆಗಳ ಮೂರು ಕಬ್ಬಿಣದ ರಥಗಳಾದ ನಂದಿಘೋಷ, ತಾಳಧ್ವಜ ಮತ್ತು ದರ್ಪ ದಲನ ರಥಗಳನ್ನು ರಥಖಳದಿಂದ ಲಾಯನ್ಸ್ ಗೇಟ್‌ವರೆಗೆ ತಂದು ನಿಲ್ಲಿಸಲಾಗಿದೆ. ದೇವತೆಗಳನ್ನು ರಥದವರೆಗೆ ತರುವ ಭವ್ಯ ಮೆರವಣಿಗೆ ಇಂದು ಬೆಳಿಗ್ಗೆ ೯.೩೦ಕ್ಕೆ ಆರಂಭವಾಗಲಿದೆ. ಬಳಿಕ ಮಧ್ಯಾಹ್ನ ೨.೩೦ರಿಂದ ೩.೩೦ರ ವರೆಗೆ ಗಜಪತಿ ರಾಜ ದಿವ್ಯಸಿಂಗ್ ದೇವ್ ಅವರು ಮೂರು ರಥಗಳ ಮೇಲೂ 'ಛೇರಾ ಪಹಾರಾ' ವಿಧಿಯನ್ನು ನೆರವೇರಿಸಲಿದ್ದಾರೆ. ಮೂರು ರಥಗಳ ಎಳೆಯುವುದು ಸಂಜೆ ೪ ಗಂಟೆಗೆ ಗ್ರಾಂಡ್ ಟ್ರಂಕ್ ರಸ್ತೆಯಲ್ಲಿ ಪ್ರಾರಂಭವಾಗಲಿದೆ. ಪರಂಪರೆಯ ಪ್ರಕಾರ, ಮೊದಲಿಗೆ ದೇವರಾದ ಬಲಭದ್ರರ ತಾಳಧ್ವಜ ರಥವು ಶ್ರೀ ಗುಂಡಿಚಾ ಮಂದಿರದತ್ತ ಸಾಗುತ್ತದೆ. ನಂತರ ದೇವಿ ಸುಭದ್ರೆಯ ದರ್ಪದಲನ ರಥವು ಮುನ್ನಡೆಯುತ್ತದೆ. ಕೊನೆಗೆ, ಶ್ರೀ ಜಗನ್ನಾಥರ ನಂದಿಘೋಷ ರಥವು ಮೆರವಣಿಗೆಯಲ್ಲಿ ಸಾಗುತ್ತದೆ. ಸರ್ಕಾರ ಮತ್ತು ಪೊಲೀಸ್

ಇಲಾಖೆ ಸಾರ್ವಜನಿಕರ ಸುರಕ್ಷತೆ, ಗುಂಪು ನಿಯಂತ್ರಣ, ಸಂಚಾರ ವ್ಯವಸ್ಥೆ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಸಮರ್ಪಕ ಕ್ರಮಗಳನ್ನು ಕೈಗೊಂಡಿವೆ.

><><><><><><><

ಆಪರೇಷನ್ ಸಿಂಧು ಅಡಿಯಲ್ಲಿ ನಡೆಸಲಾದ ಕಾರ್ಯಾಚರಣೆಯಲ್ಲಿ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸುವ ಪ್ರಯತ್ನಗಳಿಗೆ ಬೆಂಬಲ ನೀಡಿದ ಇಸ್ರೇಲ್, ಇರಾನ್, ಜೋರ್ಡಾನ್, ಈಜಿಪ್ಟ್, ಅರ್ಮೇನಿಯಾ ಮತ್ತು ತುರ್ಕಮೆನಿಸ್ತಾನ್ ಸರ್ಕಾರಗಳಿಗೆ ಭಾರತ ಸರ್ಕಾರ ಕೃತಜ್ಞತೆಯನ್ನು ವ್ಯಕ್ತಪಡಿಸಿದೆ. ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಇರಾನ್‌ನ ಯುದ್ಧ ವಲಯದಿಂದ ಭಾರತೀಯ ಪ್ರಜೆಗಳನ್ನು ಮರಳಿ ಕರೆತರಲು ಭಾರತ ಇದುವರೆಗೆ ೧೪ ವಿಮಾನಗಳನ್ನು ಬಳಸಿದೆ ಎಂದು ಹೇಳಿದರು. ಇಸ್ರೇಲಿ ವಾಯುಪ್ರದೇಶವನ್ನು ಮುಚ್ಚಿದ್ದರಿಂದ, ಭಾರತೀಯ ಪ್ರಜೆಗಳನ್ನು ಗಡಿಯಲ್ಲಿರುವ ಜೋರ್ಡಾನ್ ಮತ್ತು ಈಜಿಪ್ಟ್‌ಗೆ ಕರೆದೊಯ್ಯಲಾಯಿತು, ಅಲ್ಲಿಂದ ಅವರನ್ನು ವಿಶೇಷ ವಿಮಾನಗಳಲ್ಲಿ ಭಾರತಕ್ಕೆ ಮರಳಿ ಕರೆತರಲಾಯಿತು. ಭಾರತವು ಇರಾನ್ ಸುಮಾರು ೧೦ ಸಾವಿರ ಭಾರತೀಯ ಸಮುದಾಯದ ಸದಸ್ಯರನ್ನು ಮತ್ತು ಇಸ್ರೇಲ್ ಸುಮಾರು ೪೦ ಸಾವಿರ ಭಾರತೀಯ ಪ್ರಜೆಗಳನ್ನು ಹೊಂದಿದೆ ಎಂದು ಮಾಹಿತಿ ನೀಡಿದರು. ಆಪರೇಷನ್ ಸಿಂಧು ಅಡಿಯಲ್ಲಿ, ಇರಾನ್‌ನಿಂದ ೧೭೩ ಭಾರತೀಯ ಪ್ರಜೆಗಳನ್ನು ಹೊತ್ತ ವಿಶೇಷ ವಿಮಾನ ನಿನ್ನೆ ತಡರಾತ್ರಿ ಅರ್ಮೇನಿಯಾದ ಯೆರೆವಾನ್‌ನಿಂದ ನವದೆಹಲಿಗೆ ತಲುಪಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಭಾರತೀಯ ವಾಯುಪಡೆಯ ಮೂರು ವಿಮಾನಗಳು ಸೇರಿದಂತೆ ೧೯ ವಿಶೇಷ ವಿಮಾನಗಳ ಮೂಲಕ ಇದುವರೆಗೆ ಒಟ್ಟು ೪ ಸಾವಿರ ೪೧೫ ಭಾರತೀಯ ಪ್ರಜೆಗಳನ್ನು ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ. ಇದರಲ್ಲಿ ಇರಾನ್‌ನಿಂದ ಸ್ಥಳಾಂತರಿಸಲಾದ ೩ ಸಾವಿರ ೫೯೭ ಪ್ರಜೆಗಳು ಮತ್ತು ಇಸ್ರೇಲ್‌ನಿಂದ ೮೧೮ ಪ್ರಜೆಗಳು ಸೇರಿದ್ದಾರೆ ಎಂದು ಅವರು ಹೇಳಿದರು. ಭಾರತೀಯ ಪ್ರಜೆಗಳ ಜೊತೆಗೆ, ೧೪ ಸಾಗರೋತ್ತರ ಭಾರತೀಯ ನಾಗರಿಕ ಕಾರ್ಡ್‌ದಾರರು, ೯ ನೇಪಾಳಿ ಪ್ರಜೆಗಳು, ೪ ಶ್ರೀಲಂಕಾ ಪ್ರಜೆಗಳು ಮತ್ತು ಭಾರತೀಯ ಪ್ರಜೆಯ ಓರ್ವ ಇರಾನಿನ ಸಂಗಾತಿಯನ್ನು ಸಹ ಇರಾನ್‌ನಿಂದ ಸ್ಥಳಾಂತರಿಸಲಾಗಿದೆ ಎಂದು ಜೈಸ್ವಾಲ್ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆ ಪ್ರಮುಖ ಆದ್ಯತೆಯಾಗಿದೆ ಎಂದು ಸಚಿವಾಲಯ ಪುನರುಚ್ಚರಿಸಿದೆ.

><><><><><><

ದುಬೈನಿಂದ ಸಮುದ್ರದ ಮೂಲಕ ಭಾರತಕ್ಕೆ ಅಕ್ರಮವಾಗಿ ಆಮದು ಮಾಡಿಕೊಳ್ಳಲಾಗುತ್ತಿದ್ದ ಸುಮಾರು ೯ ಕೋಟಿ ರೂಪಾಯಿ ಮೌಲ್ಯದ ೧ ಸಾವಿರದ ೧೧೫ ಮೆಟ್ರಿಕ್ ಟನ್ ಪಾಕಿಸ್ತಾನ ಮೂಲದ ಸರಕುಗಳನ್ನು ಸಾಗಿಸುತ್ತಿದ್ದ ೩೯ ಕಂಟೇನರ್‌ಗಳನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ ಡಿಆರ್‌ಐ ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎರಡು ಪ್ರತ್ಯೇಕ ಪ್ರಕರಣಗಳಲ್ಲಿ, ಈ ಸರಕುಗಳನ್ನು ನವಾ ಶೇವಾ ಬಂದರಿನಲ್ಲಿ ವಶಪಡಿಸಿಕೊಳ್ಳಲಾಗಿದೆ. ಈ ನಡುವೆ ಯುಎಇಯ ದುಬೈ ಮೂಲಕ ಪಾಕಿಸ್ತಾನ ಮೂಲದ ಸರಕುಗಳನ್ನು ಅಕ್ರಮವಾಗಿ ಆಮದು ಮಾಡಿಕೊಳ್ಳುವುದನ್ನು ಗುರಿಯಾಗಿಟ್ಟುಕೊಂಡು ಡಿಆರ್‌ಐ "ಆಪರೇಷನ್ ಡೀಪ್ ಮ್ಯಾನಿಫೆಸ್ಟ್" ಎಂಬ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಅಧಿಕೃತ ಮಾಹಿತಿಯ ಪ್ರಕಾರ, ಆಮದು ಮಾಡಿಕೊಳ್ಳುವ ಸಂಸ್ಥೆಯ ಪಾಲುದಾರರಲ್ಲಿ ಒಬ್ಬರನ್ನು ನಿನ್ನೆ ಬಂಧಿಸಲಾಗಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಭಾರತ ಸರ್ಕಾರವು ಮೇ ೨, ೨೦೨೫ ರಿಂದ ಜಾರಿಗೆ ಬರುವಂತೆ ಪಾಕಿಸ್ತಾನದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ನಿಷೇಧವನ್ನು ವಿಧಿಸಿತ್ತು. ಆದಾಗ್ಯೂ, ಕೆಲವು ಆಮದುದಾರರು ಸರಕುಗಳ ಮೂಲವನ್ನು ತಪ್ಪಾಗಿ ಘೋಷಿಸುವ ಮೂಲಕ ಮತ್ತು ಸಂಬಂಧಿತ ಸಾಗಣೆ ದಾಖಲೆಗಳನ್ನು ಕುಶಲತೆಯಿಂದ ನಿರ್ವಹಿಸುವ ಮೂಲಕ ಸರ್ಕಾರದ ನೀತಿಯನ್ನು ತಪ್ಪಿಸಲು ಪ್ರಯತ್ನಿಸಿದ್ದಾರೆ. 'ಆಪರೇಷನ್ ಸಿಂಧೂರ್" ಮತ್ತು ಹೆಚ್ಚಿದ ಭದ್ರತೆಯ ನಡುವೆ, ಪಾಕಿಸ್ತಾನದಿಂದ ಬರುವ ಸರಕುಗಳನ್ನು ಗುರಿಯಾಗಿಸಿಕೊಂಡು ಡಿಆರ್‌ಐ ಹೆಚ್ಚಿನ ಗುಪ್ತಚರ ಸಂಗ್ರಹಣೆ ಮತ್ತು ದತ್ತಾಂಶ ವಿಶ್ಲೇಷಣೆಯ ಮೂಲಕ ತನ್ನ ಜಾಗರೂಕತೆಯನ್ನು ತೀವ್ರಗೊಳಿಸಿದೆ.

><><><><><><

ಆಕ್ಸಿಯಂ ಮಿಷನ್-೪ ಹೊತ್ತ ಸ್ಪೇಸ್‌ಎಕ್ಸ್‌ನ ಡ್ರ್ಯಾಗನ್ ಬಾಹ್ಯಾಕಾಶ ನೌಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಿದ್ದು ಯಶಸ್ವಿಯಾಗಿ ನಿನ್ನೆ ಸಂಜೆ ೪ ಗಂಟೆಗೆ ಡಾಕ್ ಆಗಿದೆ. ಆ ಮೂಲಕ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಕಾಲಿಟ್ಟ ಮೊದಲ ಭಾರತೀಯ ಗಗನಯಾತ್ರಿ ಎಂಬ ಹೆಗ್ಗಳಿಗೆ ಪಾತ್ರರಾಗಿದ್ದಾರೆ. ಲಕ್ನೋನಲ್ಲಿ ಜನಿಸಿದ ಶುಭಾಂಶು ಶುಕ್ಲಾ, ೧೯೮೪ರ ರಾಕೇಶ್ ಶರ್ಮಾ ನಂತರ ಬಾಹ್ಯಾಕಾಶಕ್ಕೆ ತೆರಳಿದ ಎರಡನೇ ಭಾರತೀಯರಾಗಿದ್ದಾರೆ. ಈ ಐತಿಹಾಸಿಕ ಮಿಷನ್‌ನಲ್ಲಿ ಅಮೆರಿಕಾ, ಭಾರತ, ಪೋಲೆಂಡ್ ಮತ್ತು ಹಂಗೇರಿ ದೇಶಗಳ ನಾಲ್ವರು ಗಗನಯಾತ್ರಿಗಳು ೧೪ ದಿನಗಳ ವೈಜ್ಞಾನಿಕ ಯಾತ್ರೆಗೆ ಲೋ

ಅರ್ಥ್ ಆರ್ಬಿಟ್‌ನತ್ತ ಪ್ರಯಾಣಿಸಿದ್ದಾರೆ. ಶುಕ್ಲಾ ಬಾಹ್ಯಾಕಾಶ ಆಹಾರ ಮತ್ತು ಪೋಷಣೆಗೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸಲಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಅವರು ಶುಕ್ಲಾ ಮತ್ತು ಅಕ್ಸಿಯಮ್-೪ ತಂಡದ ಯಶಸ್ವಿ ಡಾಕಿಂಗ್ ಕುರಿತಂತೆ ಅಭಿನಂದನೆಗಳನ್ನು ತಿಳಿಸಿದರು. ಮಾಧ್ಯಮಗಳೊಂದಿಗೆ ಮಾತನಾಡಿರುವ ಸಚಿವರು, ಭಾರತ, ಮಿಷನ್‌ನ ಪ್ರಮುಖ ಪಾತ್ರ ನಿರ್ವಹಿಸುವ ಭರವಸೆಯೊಂದಿಗೆ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಧ್ವನಿ: ಡಾ. ಜಿತೇಂದ್ರ ಸಿಂಗ್ - ೩೮ ಸೆಕೆಂಡು

><><><><><><><

ಭಾರತ ೨೦೨೯ರ ವಿಶ್ವ ಪೊಲೀಸ್ ಮತ್ತು ಅಗ್ನಿಶಾಮಕ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸಲಿದೆ. ಈ ಘೋಷಣೆ ಅಮೆರಿಕದ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಡಬ್ಲ್ಯೂಪಿಎಫ್‌ಜಿ ಒಕ್ಕೂಟ ಸಭೆಯಲ್ಲಿ ಭಾರತದ ಪ್ರತಿನಿಧಿಗಳ ಪ್ರಸ್ತಾವನೆ ಬಳಿಕ ಈ ನಿರ್ಧಾರ ಪ್ರಕಟಿಸಲಾಗಿದೆ. ಈ ಭಾರಿ ಪಂದ್ಯಗಳು ಗುಜರಾತ್‌ನ ಅಹಮದಾಬಾದ್, ಗಾಂಧಿನಗರ ಮತ್ತು ಏಕತಾ ನಗರಗಳಲ್ಲಿ ನಡೆಯಲಿವೆ. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಇದು ರಾಜ್ಯದ ಹೆಮ್ಮೆಯ ಕ್ಷಣವಾಗಿದೆ. ಈ ಸಾಧನೆಯ ಹಿಂದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ನಾಯಕತ್ವವಿದೆ ಎಂದು ಅವರು ಹೇಳಿದರು. ವಿಶ್ವದ ಅತಿದೊಡ್ಡ ಬಹು-ಕ್ರೀಡಾ ಕಾರ್ಯಕ್ರಮಗಳಲ್ಲಿ ಒಂದಾದ ಈ ಕೂಟದಲ್ಲಿ ೭೦ಕ್ಕೂ ಹೆಚ್ಚು ದೇಶಗಳಿಂದ ಸಾವಿರಾರು ಪೊಲೀಸರು, ಅಗ್ನಿಶಾಮಕರು ಮತ್ತು ಸಿಬ್ಬಂದಿ ಭಾಗವಹಿಸುತ್ತಾರೆ.

><><><><><><><

ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆ - ಐಬಿಪಿಎಸ್ ನಡೆಸುವ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ ಪರಿಶೀಲನೆಗಾಗಿ ಆಧಾರ್ ದೃಢೀಕರಣವನ್ನು ಬಳಸಲು ಸರ್ಕಾರ ಅಧಿಕಾರ ನೀಡಿದೆ. ಹಣಕಾಸು ಸಚಿವಾಲಯದ ಅಡಿಯಲ್ಲಿರುವ ಹಣಕಾಸು ಸೇವೆಗಳ ಇಲಾಖೆ ಹೊರಡಿಸಿದ ಅಧಿಸೂಚನೆಯಲ್ಲಿ, ಪರೀಕ್ಷೆಗಳ ಸಮಯದಲ್ಲಿ ಅಭ್ಯರ್ಥಿಗಳ ಗುರುತನ್ನು ಪರಿಶೀಲಿಸಲು ಮತ್ತು ಅದು ನಡೆಸುವ ನೇಮಕಾತಿ ಪ್ರಕ್ರಿಯೆಗಳಿಗೆ ಐಬಿಪಿಎಸ್ ಈಗ ಸ್ವಯಂಪ್ರೇರಿತವಾಗಿ ಆಧಾರ್ ದೃಢೀಕರಣವನ್ನು ಬಳಸಬಹುದು. ಈ ಉಪಕ್ರಮವು ಪರೀಕ್ಷೆಗಳ ಸಮಯದಲ್ಲಿ ನಕಲಿ ಅಭ್ಯರ್ಥಿಗಳು ಭಾಗವಹಿಸುವುದು ಮತ್ತು ಇತರ ಅಕ್ರಮಗಳನ್ನು ತಡೆಯುವಲ್ಲಿ ಸಹಕರಿಸಲಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.